ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್‌ಯೋಜನೆಯ ಅನುಷ್ಠಾನದ ಬಗ್ಗೆ

767 - ಶ್ರೀ ವಸಂತ ವಿ ಸಾಲಿಯಾನ (ಕಾಪು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳಲ್ಲಿ 1995-96, 96-97, ಹಾಗೂ 97-98ರ ಸಾಲಿನಲ್ಲಿ ಮಂಜೂರಾದ ಮನೆಗಳೆಷ್ಟು ?

ಆ) ಮಂಜೂರಾದ ಮನೆಗಳಲ್ಲಿ ಸಂಪೂರ್ಣಗೊಂಡ ಮನೆಗಳೆಷ್ಟು ? ಸಂಪೂರ್ಣಗೊಳ್ಳದಿರುವ ಮನೆಗಳೆಷ್ಟು ? ಇವುಗಳು ಸಂಪೂರ್ಣಗೊಳ್ಳದೇ ಬಾಕಿಯಿರುವ ಕಾರಣವೇನು ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ವರ್ಷ	ಆಶ್ರಯ	ಡಾ|| ಅಂಬೇಡ್ಕರ್	ಐ.ಎ.ವೈ
1995-96	60,000 (ಗ್ರಾ) 25,000 (ನ)	25000	54129
1996-97	40,000	35000	53180
1997-98	40,633	35000	37652

ಆ) ವರ್ಷ	ಸಂಪೂರ್ಣಗೊಂಡ ಮನೆಗಳು	ಸಂಪೂರ್ಣಗೊಳ್ಳದಿರುವ ಮನೆಗಳು
1995-96		
ಆಶ್ರಯ	57657 (ಹಿಂದಿನ ಸಾಲಿನ ಮನೆಗಳು ಸೇರಿ)	5845
ಅಂಬೇಡ್ಕರ್	22860	2140
ಐ.ಎ.ವೈ	37460	16669
1996-97		
ಆಶ್ರಯ	17690	22310
ಅಂಬೇಡ್ಕರ್	16001	18999
ಐ.ಎ.ವೈ	45503	7677
1997-98		
ಆಶ್ರಯ	1416	39217
ಅಂಬೇಡ್ಕರ್	-	-
ಐ.ಎ.ವೈ	36430	1195

ಜಿಲ್ಲಾಧಿಕಾರಿಗಳಿಂದ ಸಾಲದ ಯೋಜನಾ ವರದಿ ಮಂಡಿಸಲು ನಿದಾನವಾದ್ದರಿಂದ ಹಾಗೂ ಹುಡ್ಕೋ ಸಾಲದ ಹಣ ಹಂತಹಂತವಾಗಿ ಬಿಡುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಗತಿ ಕುಂಠಿತಗೊಂಡಿದೆ. ಹಾಗೂ ಅಂಬೇಡ್ಕರ್ ಯೋಜನೆಯಡಿ ಮನೆಗಳ ನಿರ್ಮಾಣಕ್ಕೆ ಸಾಮಾನ್ಯ ಆಯವ್ಯಯದಲ್ಲಿ ನಿಗಧಿಪಡಿಸಿರುವುದಿಲ್ಲ. ವಿಶೇಷ ಘಟಕ ಯೋಜನೆಯಡಿ ಯಿರುವ ಅಭಿವೃದ್ಧಿ ಇಲಾಖೆಗಳಿಗೆ ನೀಡಿದ ಹಣದಲ್ಲಿ ಭಾಗಶಃ ಹಣವನ್ನು ಹಿಂದಕ್ಕೆ ಪಡೆದು ಅದನ್ನು ಕ್ರೋಢೀಕರಿಸಿ ಪೂರಕ ಅಂದಾಜಿನ ಆಯವ್ಯಯದಲ್ಲಿ ಒದಗಿಸಿಕೊಂಡು ನಂತರ ಬಿಡುಗಡೆ ಮಾಡಲಾಗುತ್ತಿದೆ. ಆದ್ದರಿಂದ ಆರ್ಥಿಕ ವರ್ಷದ ಅಂತ್ಯದಲ್ಲೇ ಹಣವನ್ನು ಅನುಷ್ಟಾನಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತಿರುವುದರಿಂದ ಪ್ರಗತಿಯಲ್ಲಿ ಕುಂಠಿತವಾಗಿರುತ್ತದೆ.

ಹಾಗೂ ಫಲಾನುಭವಿಗಳ ಆಯ್ಕೆಯು ನಿಧಾನವಾಗಿರುವುದು ಪ್ರಗತಿಯಲ್ಲಿ ಕುಂಠಿತವಾಗಿದೆ.

ರಾಜ್ಯದಲ್ಲಿ ಮನೆ ನಿವೇಶನ ರಹಿತರುಗಳ ಬಗ್ಗೆ

768 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇದುವರೆಗೆ ಎಷ್ಟು ಮನೆ ನಿವೇಶನ ರಹಿತರನ್ನು ಗುರುತಿಸಲಾಗಿದೆ?*

ಆ) *1995-96, 1996-97 ಮತ್ತು 1997-98ನೇ ಸಾಲಿನಲ್ಲಿ ವಿತರಣೆ ಮಾಡಿದ ಮನೆ ನಿವೇಶನಗಳೆಷ್ಟು? (ಜಿಲ್ಲಾ ವಿವರ ನೀಡುವುದು)*

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಅನುಬಂಧ 1 ರಲ್ಲಿ ವಿವರಗಳನ್ನು ನೀಡಲಾಗಿದೆ.

ಆ) ಅನುಬಂಧ 2 ರಲ್ಲಿ ವಿವರಗಳನ್ನು ನೀಡಲಾಗಿದೆ.